**ಕರ್ನಾಟಕ ಸರ್ಕಾರ**

ಸಂಖ್ಯೆ: ಪಿಯು 572/ಆಪಿಎ/ಪಿನಿ3/ಬಡ್ತಿ/2013 (ಭಾಗ-2)

ನಿರ್ದೇಶಕರ ಕಚೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 012.
ದಿನಾಂಕ: 25.05.2017.

**ಜ್ಞಾಪನ**

ವಿಷಯ:- ಉಪನ್ಯಾಸಕರ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ಬಡ್ತಿ ಹೊಂದಿರುವ ಪ್ರಾಂಶುಪಾಲರುಗಳಿಗೆ ಕೌನ್ಸಲಿಂಗ್ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 121 ಡಿಜಿಡಿ 2016 ದಿ: 02.01.2017.
2. ಸರ್ಕಾರದ ಸೇರ್ಪಡೆ ಸಂಖ್ಯೆ: ಇಡಿ 121 ಡಿಜಿಡಿ 2016 ದಿ: 10.01.2017.
3. ಸರ್ಕಾರದ ಪತ್ರ ಸಂಖ್ಯೆ: ಇಡಿ 121 ಡಿಜಿಡಿ 2016 ದಿ: 08.05.2017.

-*-

ಉಲ್ಲೇಖ 1 ರ ಸರ್ಕಾರದ ಆದೇಶದ ಭಾಗ-I ಮತ್ತು ಭಾಗ-2 ರಲ್ಲಿ ಉಪನ್ಯಾಸಕ ವೃಂದದಿಂದ ಪ್ರಾಂಶುಪಾಲರ ವೃಂದಕ್ಕೆ ಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಿ ಆದೇಶಿಸಿರುತ್ತದೆ. ಉಲ್ಲೇಖ 2 ರಲ್ಲಿ ಸ್ಥಳನಿಯುಕ್ತಿಗೊಳಿಸಿರುವ ಉಪನ್ಯಾಸಕರು ಕರ್ತವ್ಯಕ್ಕೆ ಹಾಜರಾಗದೇ ಇರುವವರಿಗೆ ಸ್ಥಳನಿಯುಕ್ತಿಯನ್ನು ಕೌನ್ಸಲಿಂಗ್ ನಡೆಸಲು ಅನುಮತಿ ನೀಡಲಾಗಿದೆ. ಮುಂದುವರೆದು ಉಲ್ಲೇಖ 3 ರಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 121 ಡಿಜಿಡಿ 2016 ದಿನಾಂಕ: 02.01.2017 ರ ಭಾಗ-I ಮತ್ತು ಭಾಗ-2 ರನ್ವಯ ಬಡ್ತಿ ಹೊಂದಿ ಸ್ಥಳನಿಯುಕ್ತಿಗೊಳಿಸಿರುವ ಹುದ್ದೆಯ ಕರ್ತವ್ಯಕ್ಕೆ ಹಾಜರಾಗಿರುವವರಿಗೂ ಸಹ ಕೌನ್ಸಿಲಿಂಗ್‌ಗೆ ಹಾಜರಾಗಲು ಅನುಮತಿಯನ್ನು ನೀಡಿದೆ.

ಉಲ್ಲೇಖ 3 ರಲ್ಲಿ ನೀಡಿರುವ ಅನುಮತಿಯಂತೆ ಈಗಾಗಲೇ ಕರ್ತವ್ಯಕ್ಕೆ ಹಾಜರಾಗಿರುವವರು ಸ್ಥಳನಿಯುಕ್ತಿ ಕೌನ್ಸಿಲಿಂಗ್‌ಗೆ ಹಾಜರಾಗಲು ಇಚ್ಛಿಸಿದಲ್ಲಿ ಇಚ್ಛಾ ಪತ್ರವನ್ನು **ದಿನಾಂಕ: 29.05.2017 ರೊಳಗೆ "ಡಾ. ಡಿ ಕೆ ಸುಧಾ, ಉಪ ನಿರ್ದೇಶಕರು (ಆಡಳಿತ) (ಪ್ರಭಾರ), ಕೊಠಡಿ ಸಂಖ್ಯೆ: 211, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 012."** ರವರಿಗೆ ಸಲ್ಲಿಸಲು ಈ ಮೂಲಕ ಸೂಚಿಸಿದೆ.

25.5.17

ಜಂಟಿ ನಿರ್ದೇಶಕರು (ಆಡಳಿತ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ:
1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಕಳುಹಿಸುತ್ತಾ ನಿಮ್ಮ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಬಂಧಿಸಿದ ಉಪನ್ಯಾಸಕರು/ಪ್ರಾಂಶುಪಾಲರುಗಳಿಗೆ ತಿಳಿಸುವುದು.
2. ಸಂಬಂಧಿಸಿದ ಎಲ್ಲಾ ಕಾಲೇಜಿನ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕೆ.
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು **ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸಲು.**
4. ಕಚೇರಿ ಪ್ರತಿ.